ತಂದಿದ್ದೇನೆ. ಎರಡನೆಯದಾಗಿ ಈ ಕಿರುಯೋಜನೆ ಒಳ್ಳೆಯದಿರುವುದರಿಂದ ಬೀದಿ ಬೀದಿಗೂ ಹಾಕಲಾವುದು ಒಳ್ಳೆಯದೆಂದು ಸಲಹೆ ಮಾಡುತ್ತಿದ್ದೀರಿ. ಇದಕ್ಕೆ ಅಗತ್ಯ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲ ಹಾಕಿಸಿ ಎಂದು ನನ್ನ ಅಧಿಕಾರಿಗಳಿಗೆ ನಾನು ಆದೇಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.--ಸಂತೋಷ. ಹಾಗೆಯೇ, ಈ ವಿನಿವಾಟರ್ ಸ್ಕೀಮ್‌ಗೆ ಉಪಯೋಗಿಸುವ ಸಾಮಾನುಗಳು ತುಂಬಾ ಕಳಪೆದರ್ಜೆಯವು. ಅವುಗಳು ಕೆಟ್ಟರೆ ರಿಪೇರಿಗೆ ನಿಮ್ಮ ಇಲಾಖೆಯಿಂದ ದುಡ್ಡು ಬರುವುದಿಲ್ಲ, ತಾಲ್ಲೂಕು ಬೋರ್ಡ್‌ಗಳಲ್ಲಿಯೂ ದುಡ್ಡಿಲ್ಲ. ಆದ್ದರಿಂದ ಇದಕ್ಕೆ ಯಾವುದಾದರೂ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.--ಹಿಂದೆ ಇದ್ದ ಪದ್ಧತಿಯಂತೆ ಸರ್ಕಾರದ ಸ್ಟೋರ್ಸ್ ಪರ್ಚೇಸ್ ಡಿಪಾರ್ಟ್‌ಮೆಂಟಿನವರು ಇಂಥಿಂಥ ಕಡೆಯೇ ಖರೀದಿಸಬೇಕೆಂದು ಕಾನೂನು ಇತ್ತು. ಈಗ ನಾವು ಅದನ್ನು ಬದಲಾಯಿಸಿ ನಾಲ್ಕೈದು ಕಂಪೆನಿಗಳಲ್ಲಿ ನೋಡಿ ಒಳ್ಳೆಯದನ್ನು ಆಯ್ಕೆ ಮಾಡುತ್ತಿದ್ದೇವೆ. ರಿಪೇರಿ ಬಾಬ್ತು ಖರ್ಚಿನ ಮೊಬಲಗು ಬಜೆಟ್‌ನಲ್ಲಿ ಇರಲಿಲ್ಲ. ಈಗ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿರುವಾಗ ಅವುಗಳ ಸೋರ್ಸ್‌ನಿಂದ ಹಣವನ್ನು ಒದಗಿಸಿದ್ದೇವೆ. ಅದು ಆಗುತ್ತದೆ.

ರೋಣ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

೬೬೯. ಶ್ರೀ ಜ್ಞಾನದೇವ ಎಸ್.ದೊಡ್ಡಮೇಟಿ (ರೋಣ) : ಮಾನ್ಯ ಗ್ರಾಮಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನ ಸವಡಿ, ಇಟಗಿ, ಹಿರೇಹಾಳ ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಮೂರು ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಯೋಜನೆಗಳನ್ನು ರೂಪಿಸಲಾಗಿದೆಯೇ ?

ಇ) ಹಾಗಿದ್ದಲ್ಲಿ ಈ ಯೋಜನೆಗಳನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).-

ಅ) ಬಂದಿದೆ.

ಆ) ಹೌದು.

ಇ) ಸವಡಿ ಗ್ರಾಮ :- ಈ ಗ್ರಾಮಕ್ಕೆ ಚಿಕ್ಕ ಗಾತ್ರದ ನೀರು ಸರಬರಾಜು ಯೋಜನೆಯನ್ನು ೨೪-೩-೮೬ರಂದು ಚಾಲನೆಗೊಳಿಸಲಾಗಿದೆ.

ಇಟಗಿ ಗ್ರಾಮ :- ಈ ಗ್ರಾಮಕ್ಕೆ ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಅನುಮತಿ ದೊರೆತಿದ್ದು ೧೯೮೭-೮೮ರ ಆಯವ್ಯಯದಲ್ಲಿ ಸೇರಿಸಲಾಗಿದೆ. ೧೯೮೮-೮೯ರ ಅಂತ್ಯದೊಳಗೆ ಕಾರ್ಯಗತಗೊಳಿಸಲಾಗುವುದು.

ಹಿರೇಹಾಳ ಗ್ರಾಮ :- ಈ ಗ್ರಾಮದ ಚಿಕ್ಕ ನೀರು ಸರಬರಾಜು ಯೋಜನೆಯು ನಾಗರೀಕ ಕೆಲಸಗಳು ಮುಗಿದಿದ್ದು ವಿದ್ಯುಚ್ಛಕ್ತಿ ಮಂಡಳಿಯಿಂದ ವಿದ್ಯುತ್ ಸರಬರಾಜು ಆದ ಕೂಡಲೇ ಯೋಜನೆಯನ್ನು ಚಾಲನೆಗೊಳಿಸಲಾಗುವುದು.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.--ಮಾನ್ಯ ಅಧ್ಯಕ್ಷರೇ, ಸವಡಿ ಗ್ರಾಮಕ್ಕೆ ಮಂಜೂರಾಗಿದ್ದ ಕಿರು ನೀರು ಸರಬರಾಜು ಯೋಜನೆ ಅಲ್ಲಿಗೆ ಸಿಕ್ಕಿಲ್ಲ. ಅಲ್ಲದೆ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನೂ ಮಂಜೂರು ಮಾಡಬೇಕು. ಇಲ್ಲಿಯವರೆಗೆ ನೀರಿನ ಟ್ಯಾಂಕ್‌ಗಳನ್ನೂ ಕಟ್ಟಿಸಿಲ್ಲ. ದಯವಿಟ್ಟು ಅದನ್ನೂ ಮಾಡಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.--ಸಭಾಧ್ಯಕ್ಷರೇ, ಜನಸಂಖ್ಯೆಯನ್ನು ಆಧರಿಸಿ ಅಲ್ಲಿ ಅಗತ್ಯ ಇದೆ ಎನಿಸಿದರೆ ಇನ್ನೂ ಎರಡು ವಾಟರ್ ಟ್ಯಾಂಕ್‌ಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.— ಈ ಗ್ರಾಮಕ್ಕೆ ಪಕ್ಕದಲ್ಲಿ ರಾಜೂರು ಎಂಬ ಗ್ರಾಮವಿದ್ದು ಅಲ್ಲಿ ನೀರು ಸರಬರಾಜು ಯೋಜನೆಯಲ್ಲಿ ಕೆಇಬಿಯವರು ಪವರ್ ಸಪ್ಲೈ ಮಾಡದೆ ಆತಂಕವಾಗಿದೆ. ಇದಕ್ಕೆ ಸ್ಪಷ್ಟ ನಿರ್ದೇಶನವನ್ನು ಕೆಇಬಿಗೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಕೆಲವು ಸಾಮಗ್ರಿಗಳ ಖರೀದಿ ಅನೇಕ ಕಡೆ ಕೆಇಬಿಯಿಂದ ಆಗಿಲ್ಲ. ಅದಕ್ಕೂ ಹೀಗೆ ಆಗಿರಬಹುದು. ಆದ್ಯತೆ ಮೇರೆಗೆ ಕಂಡಿಯುವ ನೀರಿನ ಸಪ್ಲೈಗೆ ಪವರ್ ಸಪ್ಲೈ ಕೊಡಿ ಎಂದು ಅಧಿಕಾರಿಗಳ ಮೂಲಕ ಆದೇಶ ಕೊಡುತ್ತೇನೆ.

ಮೈಸೂರು ಪ್ರಾಧಿಕಾರವನ್ನು ರಚಿಸುವ ಬಗ್ಗೆ

೫೧೩. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲು ಸರಕಾರದವರು ಯೋಜಿಸಿದ್ದಾರೆಯೆ, ಹಾಗಿದ್ದಲ್ಲಿ ಯಾವಾಗ ರಚಿಸಲಾಗುವುದು ?

ಆ) ಮೈಸೂರು ನಗರಾಭಿವೃದ್ಧಿ ಮಂಡಳಿಯು ೧೯೮೩ರಿಂದ ಇದುವರೆವಿಗೆ ನಿವೇಶನಕ್ಕಾಗಿ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ ಹಾಗೂ ಎಷ್ಟು ಸಂಘ ಸಂಸ್ಥೆಗಳಿಗೆ ಭೂಮಿ ನೀಡಿದೆ ?

ಇ) ಹಂಚಲಾಗಿರುವ ನಿವೇಶನಗಳೆಷ್ಟು ಹಾಗೂ ಮನೆಗಳು ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಇದೇ ಅಧಿವೇಶನದಲ್ಲಿ ಈ ಬಗ್ಗೆ ಒಂದು ಕರಡು ಮಸೂದೆಯನ್ನು ಮಂಡಿಸಿದೆ. ಅದು ಜಾರಿಗೆ ಬಂದ ಮೇಲೆ ಪರಿಶೀಲಿಸಲಾಗುವುದು.

ಆ) ೧೩೬೬.೨೭ ಎಕರೆ ಜಮೀನನ್ನು ದಿನಾಂಕ ೧-೧-೧೯೮೩ರಿಂದ ೩೧-೧೨-೧೯೮೭ರವರೆಗೆ ಸ್ವಾಧೀನ ಪಡಿಸಿಕೊಂಡಿರುತ್ತೆ. ೬೬೪.೩೧ ಎಕರೆಯಷ್ಟು ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಿರುತ್ತೆ.

ಇ) ೯೯೭೭ ನಿವೇಶನಗಳನ್ನು ಮತ್ತು ೭೩ ಮನೆಗಳನ್ನು ಮಂಜೂರು ಮಾಡಿರುತ್ತದೆ.

ಶ್ರೀ ಎಂ ಶಿವಣ್ಣ.— ಸಂಘ ಸಂಸ್ಥೆಗಳಿಗೆ ಮೈಸೂರು ನಗರಾಭಿವೃದ್ಧಿ ಮಂಡಲಿಯವರು ಭೂಮಿಯನ್ನು ನೀಡಲಾಗಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ಅವು ಯಾವ್ಯಾವ ಸಂಘ ಸಂಸ್ಥೆಗಳು ಎನ್ನುವುದನ್ನು ಹೇಳಬೇಕು ಹಾಗೂ ೧೯೮೩ರಿಂದ ನೀಡಿರುವ ನಿವೇಶನ ಮನೆಗಳಲ್ಲಿ, ಪರಿಶಿಷ್ಟ ಜಾತಿ, ವರ್ಗದವರಿಗೆ ಎಷ್ಟು ಹಂಚಿದ್ದೀರಿ, ಅಂಗವಿಕಲರಿಗೆ ಎಷ್ಟು ಹಂಚಿದ್ದೀರಿ ಎನ್ನುವುದನ್ನು ತಿಳಿಸಬೇಕು. ಮನೆಗಳು ಮತ್ತು ನಿವೇಶನಗಳನ್ನು ವಿತರಣೆ ಮಾಡಬೇಕಾದರೆ ಮೈಸೂರಿನಲ್ಲಾಗಲೀ, ಬೆಂಗಳೂರಿನಲ್ಲಾಗಲೀ ಇಲ್ಲವೇ ಯಾವುದೇ ನಗರ ಪ್ರದೇಶಗಳಲ್ಲಾಗಲೀ ಲಾಟರಿ ಮುಖಾಂತರವಾಗಿ ಹಂಚಿಕೆಯಾಗುವುದರಿಂದ ಬಡವರಿಗೆ ಅನ್ಯಾಯವಾಗಿದೆಯೆಂದು ಸರಕಾರಕ್ಕೆ ಗೊತ್ತಿದೆಯೇ, ಗೊತ್ತಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಸದಸ್ಯರು ಸಂಘ ಸಂಸ್ಥೆಗಳ ಪಟ್ಟಿಯನ್ನು ಕೇಳಿದ್ದಾರೆ. ಅದರ ಮಾಹಿತಿ ನನ್ನ ಹತ್ತಿರ ಇಲ್ಲ ಅದನ್ನು ತರಿಸಿಕೊಡುತ್ತೇನೆ. ಹರಿಜನ ಗಿರಿ ಜನರಿಗೆ. ಹಿಂದುಳಿದ ವರ್ಗದವರಿಗೆ ನೀಡಬೇಕಾದ ಮೀಸಲಾತಿ ಬಗ್ಗೆ ಕೇಳಿದ್ದಾರೆ, ಇದಕ್ಕಾಗಿ ಒಂದು ನಿಯಮವನ್ನು ಮಾಡಿದ್ದೇವೆ, ಅದರ ಪ್ರಕಾರ ನಿವೇಶನಗಳನ್ನು, ಮನೆಗಳನ್ನು ಹಂಚುತ್ತೇವೆ. ಎಲ್ಲಿಯಾದರೂ ಇವರಿಗೆ ತೊಂದರೆಯಾಗಿದ್ದರೆ ಇಂತಹ ಕಡೆಯಲ್ಲಿ ತೊಂದರೆಯಾಗಿದೆ ನ್ಯಾಯ ದೊರಕಿಲ್ಲವೆಂದು ಸನ್ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸತಕ್ಕಂತಹ ಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಎಂ. ಶಿವಣ್ಣ — ಲಾಟರಿ ಮೂಲಕವಾಗಿ ಸೈಟ್ ಮತ್ತು ಮನೆಯನ್ನು ವಿತರಣೆ ಮಾಡತಕ್ಕಂತಹ ಸಂದರ್ಭದಲ್ಲಿ ಬಡವನಾಗಿರುವವನು ಅರ್ಜಿ ಹಾಕಿದ್ದರೂ ಅವನಿಗೆ ಮನೆ ಸಿಗುವುದಿಲ್ಲ ಉಳ್ಳಂತಹವರು ೫-೧೦ ಸೈಟುಗಳಿಗೆ ಬೇರೆ ಬೇರೆ ಸ್ಥಳಗಳಲ್ಲಿ ಹಾಕಿಕೊಂಡಿದ್ದು. ಸಿಕ್ಕಿದಂತಹವರಿಗೇ